# ಆಹಾ ಸುದ್ದಿ!

★ ಸಸಿತೋಟ

ಜಪಾನಿನ ಹೆನ್ ನಾ ಹೋಟೆಲ್‌ನ ಪರಿಚಾರಕ ಪೆಡಂಭೂತ ರೊಬಾಟ್. ಲಾರಿಯಲ್ಲಿ ಬಂದ ಅಡುಗೆ ಸಾಮಗ್ರಿಗಳನ್ನು ಇಳಿಸುವುದರಿಂದ ಹಿಡಿದು ಈ ಹೋಟೆಲ್‌ನಲ್ಲಿ ಎಲ್ಲಾ ಕೆಲಸವನ್ನೂ ರೊಬಾಟ್‌ಗಳೇ ಮಾಡುತ್ತವಂತೆ. ಬಿಲ್ ನೀಡಲು ಹಣವಿಲ್ಲ ಎಂದು ಗಿರಾಕಿ ರುಬ್ಬುವ ಕೆಲಸ ಕೊಡಿ ಎಂದರೆ ಗಿರಾಕಿಯನ್ನೇ ಚೆನ್ನಾಗಿ ರುಬ್ಬಿ ಕಳಿಸುವ ಸಾಮರ್ಥ್ಯವೂ ಈ ರೊಬಾಟ್‌ಗಳಿಗೆ ಇದೆಯಂತೆ.




ನಾರ್ವೆಯ ಗೋಲ್ಫ್‌ಕೋರ್ಸಿನ ಹೊಂಡಗಳಲ್ಲಿ ಕಳೆದ 10 ವರ್ಷಗಳಿಂದ ಅಪರಿಚಿತ ವ್ಯಕ್ತಿಯೊಬ್ಬ ಮಲ ವಿಸರ್ಜನೆ ಮಾಡುತ್ತಿದ್ದಾನಂತೆ, ಅದೂ ಡೈಲಿ ಬೇಸಿಸ್ ಮೇಲೆ. ಅಧಿಕಾರಿಗಳು, ಸಿಬ್ಬಂದಿಗೆ ಇನ್ನೂ ಆ ವ್ಯಕ್ತಿಯನ್ನು ಕಂಡು ಹಿಡಿಯಲು ಸಾಧ್ಯವಾಗಿಲ್ಲವಂತೆ. ಇತ್ತೀಚೆಗಷ್ಟೇ ಮಲದ ರಾಶಿಯ ಆಧಾರದ ಮೇಲೆ ಆ ವ್ಯಕ್ತಿ ಪುರುಷನೇ ಗ್ಯಾರಂಟಿ ಎಂದು ಘೋಷಿಸಿದ್ದಾರಂತೆ. ಇನ್ನು ಆತನನ್ನು ಹಿಡಿಯಲು ಇಡೀ ಪಟ್ಟಣದವರೆಲ್ಲರ ಡಿಎನ್ಎ ಮ್ಯಾಚ್ ಮಾಡಿ.. ಇನ್ನೂ 10 ವರ್ಷಗಳೇ ಬೇಕಾಗಬಹುದು, ನಿಧಾನಗತಿಯ ಗೋಲ್ಫ್ ಆಟದಂತೆ.



ಒರೆಗಾನ್‌ನ ಪೋರ್ಟ್‌ಲ್ಯಾಂಡ್‌ನಲ್ಲಿ ವಿದ್ಯುತ್ ತಂತಿಗೆ ಯಾರೋ ಕಿಡಿಗೇಡಿಗಳು ಇತ್ತೀಚೆಗೆ ಲೈಂಗಿಕ ಆಟಿಕೆಗಳನ್ನು ನೇತು ಹಾಕುತ್ತಿದ್ದಾರಂತೆ. ವಾಸ ಪ್ರದೇಶಗಳಲ್ಲಿ ಇಂತಹ ದೃಶ್ಯಗಳನ್ನು ನೋಡಿ ಗಂಡಸರು ಮುಸಿಮುಸಿ ನಕ್ಕರೆ, ಹೆಂಗಳೆಯರು ನಾಚಿ ನೀರಾಗುತ್ತಾರಂತೆ. ಈ ರೀತಿ ಆಟಿಕೆಗಳು ವೇಸ್ಟ್ ಆಗುತ್ತಿರುವುದಕ್ಕೆ ಮಾತ್ರ ಯಾರಿಂದಲೂ ದೂರು ಬಂದಿಲ್ಲವಂತೆ.

ವಾಯು ಸಮಸ್ಯೆಯಿಂದ ಬಳಲುವವರಿಗೆ ಬ್ರಿಟನ್ನಿನ ಉಡುಪಿನ ಕಂಪೆನಿಯೊಂದು ಶುಭ ಸುದ್ದಿ ನೀಡಿದೆ. ಸಮಾರಂಭದಲ್ಲೋ, ಬಾಸ್ ಜೊತೆ ಮಾತನಾಡುವಾಗಲೋ ಎಂತಹ ಒಳ್ಳೆಯ ಸುಗಂಧ ಬಳಸಿದರೂ ಗ್ಯಾಸ್ ಲೀಕ್ ಆದಾಗ ಉಂಟಾಗುವ ಮುಜುಗರದಿಂದ ತಪ್ಪಿಸಲು ಶ್ರೆಡ್ಡೀಸ್ ಎಂಬ ಕಂಪೆನಿ ಕೆಟ್ಟ ವಾಸನೆ ಹೊಡೆದೋಡಿಸುವ ಪ್ಯಾಂಟ್ ಹಾಗೂ ಪೈಜಾಮಾ ತಂದಿದೆಯಂತೆ. ಪ್ಯಾಂಟ್ ಹೇಗೆ ಕೆಲಸ ಮಾಡುತ್ತದೋ ಕಂಪೆನಿಗೇ ಗೊತ್ತು, ಆದರೆ ನಿಮ್ಮ ಗ್ಯಾಸ್ ಕೆಲಸ ಮಾಡದೆ ನೀವು ನಿರಾಳವಾಗಿ ಇರಬಹುದಂತೆ.




ಭ್ರಷ್ಟಾಚಾರ ಆರೋಪ ಹೊತ್ತಿರುವ ಫಿಫಾ (ಫೆಡರೇಶನ್ ಆಫ್ ಇಂಟರ್‌ನ್ಯಾಷನಲ್ ಫುಟ್ಬಾಲ್ ಅಸೋಸಿಯೇಷನ್) ಅಧ್ಯಕ್ಷ ಸೆಪ್ ಬ್ಲಾಟರ್ ಜ್ಯೂರಿಚ್‌ನಲ್ಲಿ ಇತ್ತೀಚೆಗೆ ಪತ್ರಿಕಾಗೋಷ್ಠಿ ನಡೆಸಿದಾಗ ಲೀ ಎಂಬಾತ ಆತನ ಮೇಲೆ ನಕಲಿ ನೋಟುಗಳನ್ನು ತೂರಿದನಂತೆ. ಕೊಳೆತ ಮೊಟ್ಟೆ, ಟೊಮೆಟೊ ಬದಲು ನೋಟು ಎಸೆದಿರುವುದು ಪರಿಸ್ಥಿತಿ ಸುಧಾರಿಸಿರುವ ಲಕ್ಷಣವಿರಬಹುದು.

ಜಪಾನ್ ಬಳಿ ಇರುವ ಒಕುನೊಶಿಮಾ ಎಂಬ 'ರ್‍ಯಾಬಿಟ್ ದ್ವೀಪ'ವಿದು. ಹೆಜ್ಜೆ ಹಾಕಿದರೆ ಸಾಕು, ತರಾವರಿ ಗಾತ್ರದ ಮೊಲಗಳು ಬಂದು ಕಚಗುಳಿ ಇಡುತ್ತವೆ. 80-90 ವರ್ಷಗಳ ಹಿಂದೆ ವಿಷ ಪರೀಕ್ಷೆ ಮಾಡಲು ಇವುಗಳನ್ನು ಪ್ರಯೋಗ ಪಶುಗಳನ್ನಾಗಿ ಬಳಸಿಕೊಳ್ಳಲಾಗಿತ್ತು ಎಂದು ಜಪಾನ್ ಈಗ ಬಾಯಿ ಬಿಟ್ಟಿದೆ. ಏನೇ ಇರಲಿ, ಮೊಲಗಳು ಈಗ ಈ ದ್ವೀಪಕ್ಕೆ ಕಾಲಿಟ್ಟವರ ಮೇಲೆ ಪ್ರಯೋಗ ಮಾಡಿ ಸೇಡು ತೀರಿಸಿಕೊಳ್ಳುತ್ತಿವೆ.

